# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 143 | Pages. 2 | Date: 09-04-2025, WEDNESDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 143 - ಪುಟಗಳು : 2 - 09 ಏಪ್ರಿಲ್ 2025 ಬುಧವಾರ | Ph: 8762954248 | ದರ : ₹1


# ರಾಜ್ಯದಲ್ಲಿ ಚಂಬಲ್ ಕಣಿವೆ ಡಕಾಯಿತರು

## ಕಾಂಗ್ರೆಸ್ ವಿರುದ್ಧ ಬಿಜೆಪಿ ವಾಗ್ದಾಳಿ | ಸಿದ್ದರಾಮಯ್ಯ, ಡಿಕೆಶಿಗೆ ತರಾಟೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಚಂಬಲ್ ಕಣಿವೆಯಲ್ಲಿ ಡಕಾಯಿತರು ರಾತ್ರಿ ಮಾತ್ರ ಬರುತ್ತಿದ್ದರು. ನಮ್ಮ ರಾಜ್ಯದಲ್ಲಿ ಕಾಂಗ್ರೆಸ್‌ನವರು ಹಗಲು ದರೋಡೆ ಮಾಡುವ ಮೂಲಕ ಚಂಬಲ್ ಕಣಿವೆಯವರನ್ನು ಮೀರಿಸಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರದ ತೈಲ ಬೆಲೆ ಏರಿಕೆ, ಎಸ್‌ಸಿ-ಎಸ್ಟಿ ಅನುದಾನ ದುರುಪಯೋಗ, ಮುಸ್ಲಿಂ ಮೀಸಲಾತಿ ಹೆಚ್ಚಳ ನೀತಿ ವಿರೋಧಿಸಿ ಮಂಗಳವಾರ ಬಿಜೆಪಿ ಕೈಗೊಂಡಿದ್ದ ಜನಾಕ್ರೋಶ ಯಾತ್ರೆಯಲ್ಲಿ ಮಾತನಾಡಿದರು.

ಮುಸ್ಲಿಮರಿಗೆ ಬೆಣ್ಣೆ ಹಿಂದುಳಿದವರಿಗೆ ಸುಣ್ಣ ಎಂಬ ನೀತಿ ಅನುಸರಿಸುತ್ತಿರುವ ಕಾಂಗ್ರೆಸ್ ಅನ್ನು ರಾಜ್ಯದಲ್ಲಿ ಬುಡ ಸಮೇತ ಕಿತ್ತು ಹಾಕಬೇಕು. ಇಂತಹ ಮನೆಹಾಳು ಸರ್ಕಾರವನ್ನು ಎಂದಿಗೂ ನೋಡಿರಲಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಾಜ್ಯದಲ್ಲಿ 1730 ಕೊಲೆ, 1500 ರೈತರ ಆತ್ಮಹತ್ಯೆ, 807 ಅತ್ಯಾಚಾರ, ವಿದೇಶಿ ಪ್ರವಾಸಿಗರ ಮೇಲೆ ಹಲ್ಲೆ, ಸರ್ಕಾರಿ ನೌಕರರ ಆತ್ಮಹತ್ಯೆ ಮಿತಿಮೀರಿದೆ. ಇಂತಹ ದುರಾಡಳಿತ ಸರ್ಕಾರದಿಂದ ಜನರು ನೆಮ್ಮದಿಯಾಗಿರಲು ಹೇಗೆ ಸಾಧ್ಯ ಎಂದು ಆಕ್ರೋಶ ವ್ಯಕ್ತಪಡಿಸಿದರು.




ವಿಪಕ್ಷ ನಾಯಕ ಆರ್. ಅಶೋಕ್ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದಲೂ ಮುಖ್ಯಮಂತ್ರಿ ಕುರ್ಚಿಗಾಗಿ ಕಿತ್ತಾಟ ನಡೆಯುತ್ತಲೇ ಇದೆ. ಸಿದ್ದರಾಮಯ್ಯ ಐದು ವರ್ಷ ನಾನೇ ಮುಖ್ಯಮಂತ್ರಿ ಎನ್ನುತ್ತಾರೆ. ಡಿ.ಕೆ. ಶಿವಕುಮಾರ್ ಅವರು ಕುರ್ಚಿಯನ್ನು ಒದ್ದು ಕಿತ್ತುಕೊಳ್ಳುತ್ತೇನೆ ಎಂದು ಹೇಳುತ್ತಾರೆ. ಸಿದ್ದರಾಮಯ್ಯ ಅವರು ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಬಾಯಿಂದ ಮಾತನಾಡಿಸುವ ಬದಲು ತಾಕತ್ತು-ಧಮ್ಮು ಇದ್ದರೆ ಡಿ.ಕೆ. ಶಿವಕುಮಾರ್ ಬಾಯಿಂದ ಐದು ವರ್ಷ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಎಂದು ಘೋಷಿಸಲಿ ಎಂದು ಸವಾಲೆಸೆದರು. ಮುಸ್ಲಿಂರ ಟೋಪಿಗಳನ್ನು ಓಲೈಸಲು ಸಂವಿಧಾನ ಬದಲಾವಣೆ ಮಾಡುತ್ತೇವೆ ಎನ್ನುತ್ತಾರೆ. ಇವರಿಗೆ ಪ್ರಜಾಪ್ರಭುತ್ವ ಹಾಗು ಸಂವಿಧಾನದ ಮೇಲೆ ನಂಬಿಕೆಯಿಲ್ಲ. ಪ್ರಧಾನಿ ನರೇಂದ್ರ ಮೋದಿ ಸಂವಿಧಾನಕ್ಕೆ ಎಂಟು ಬಾರಿ ತಿದ್ದುಪಡಿ ತಂದಿರುವುದು ದೇಶದ ಒಳಿತಿಗಾಗಿಯೇ ಹೊರತು ಮತ ರಾಜಕಾರಣಕ್ಕಾಗಿ ಅಲ್ಲ ಎಂದರು.

ಮಾಜಿ ಸಚಿವ ಬಿ. ಶ್ರೀರಾಮುಲು, ಎ.ಎಸ್. ಪಾಟೀಲ್ ನಡಹಳ್ಳಿ, ಎನ್. ರವಿಕುಮಾರ್, ಶಾಸಕರಾದ ಸಿಮೆಂಟ್ ಮಂಜು, ಹೆಚ್.ಕೆ. ಸುರೇಶ್, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಮ್ ಜೆ. ಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಮಾಜಿ ಅಧ್ಯಕ್ಷ ಬಿ.ಹೆಚ್. ರೇಣುಕುಮಾರ್, ನವಿಲೆ ಅಣ್ಣಪ್ಪ ಮತ್ತಿತರರಿದ್ದರು.

### ಚುನಾವಣೆಗೆ ಈಗಿನಿಂದಲೇ ಸಿದ್ಧರಾಗಿ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, ಅಧಿಕಾರಕ್ಕೆ ಬಂದ 20 ತಿಂಗಳಲ್ಲಿ ಸರ್ಕಾರದ ವಿರುದ್ಧ ಆ ಪಕ್ಷದ ಶಾಸಕರೇ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಆರ್.ವಿ. ದೇಶಪಾಂಡೆ, ರಾಜು ಕಾಗೆ ಅವರು ಅಭಿವೃದ್ಧಿಗೆ ಅನುದಾನ ಸಿಗುತ್ತಿಲ್ಲವೆಂದು ಬಹಿರಂಗ ಹೇಳಿಕೆ ನೀಡಿದ್ದಾರೆ. ಕಾಂಗ್ರೆಸ್ ಸರ್ಕಾರ ಪತನವಾಗಲು ಬಿಜೆಪಿಯವರು ಬೇಕಿಲ್ಲ. ಆ ಪಕ್ಷದ ಶಾಸಕರೇ ಸಾಕು. ಈ ಸರ್ಕಾರ ಯಾವಾಗ ಪತನವಾಗುತ್ತದೆ ಎಂಬುದು ಗೊತ್ತಿಲ್ಲ. ಕಾರ್ಯಕರ್ತರು ಚುನಾವಣೆಗೆ ಈಗಿನಿಂದಲೇ ಸಿದ್ಧರಾಗಿ ಎಂದು ಕರೆ ನೀಡಿದರು.

ಬಿಜೆಪಿ ಯಾವತ್ತಿಗೂ ಮುಸ್ಲಿಂ ಮುಸ್ಲಿಂ ವಿರೋಧಿಯಲ್ಲ. ಆದರೆ ದೇಶದ್ರೋಹಿಗಳನ್ನು ಕ್ಷಮಿಸುವುದಿಲ್ಲ.

ಮುಸ್ಲಿಂ ವಿದ್ಯಾರ್ಥಿಗಳ ವಿದೇಶ ವ್ಯಾಸಂಗಕ್ಕೆ 30 ಲಕ್ಷ ರೂ. ಸಹಾಯಧನ ಘೋಷಿಸಿರುವ ಸಿದ್ದರಾಮಯ್ಯ ಅವರಿಗೆ ಹಿಂದೂ ಬಡ ವಿದ್ಯಾರ್ಥಿಗಳ ಬಗ್ಗೆ ಕಾಳಜಿ ಇಲ್ಲ. ಎಸ್ಸಿ-ಎಸ್ಟಿಗೆ ಮೀಸಲಿದ್ದ 38 ಸಾವಿರ ಕೋಟಿ ರೂ.ಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ.

ಕೇವಲ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ಅಭಿವೃದ್ಧಿಯನ್ನು ಸಂಪೂರ್ಣ ಕಡೆಗಣಿಸಿದೆ ಎಂದು ಆರೋಪಿಸಿದರು.

ದಿನಬಳಕೆಯ 50 ವಸ್ತುಗಳ ಬೆಲೆ ಏರಿಕೆ ಮೂಲಕ ಸಾರ್ವಜನಿಕರಿಗೆ ಗಾಯದ ಮೇಲೆ ಬರೆ ಎಳೆದಿದೆ. ರಾಜ್ಯದಲ್ಲಿ ಈ ಸರ್ಕಾರ ಇದ್ದೂ ಸತ್ತಂತಿದೆ. ಈ ಸರ್ಕಾರದ ಪಾಪದ ಕೊಡ ತುಂಬಿದೆ. ಪೆಟ್ರೋಲ್, ಡೀಸೆಲ್ ಹಾಗೂ ಹಾಲಿನ ದರ ಹೆಚ್ಚಿಸಿ ಕಾಂಗ್ರೆಸ್ ಹೈಕಮಾಂಡ್‌ನ ಹೊಟ್ಟೆ ತುಂಬಿಸುವ ಕೆಲಸವನ್ನು ಸಿದ್ದರಾಮಯ್ಯ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

### ಮಳೆ ನಡುವೆ ಪಾದಯಾತ್ರೆ

ಬಿ.ಎಂ. ರಸ್ತೆಯ ತಾಲ್ಲೂಕು ಕಚೇರಿಯಿಂದ ಆರಂಭವಾದ ಪಾದಯಾತ್ರೆ ಎನ್.ಆರ್. ವೃತ್ತ, ಹೇಮಾವತಿ ಪ್ರತಿಮೆ ಮಾರ್ಗವಾಗಿ ಸಾಗಿ ಮಹಾವೀರ ವೃತ್ತದಲ್ಲಿ ಸಮಾವೇಶಗೊಂಡಿತು. ತುಂತುರು ಮಳೆ ನಡುವೆಯೇ ನೂರಾರು ಕಾರ್ಯಕರ್ತರು ಜನಾಕ್ರೋಶ ಯಾತ್ರೆಯಲ್ಲಿ ಹೆಜ್ಜೆ ಹಾಕಿದರು. ಹಾಲಿನ ಕ್ಯಾನ್‌ಗಳನ್ನು ಹೊತ್ತು ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

# ಪುರುಷ-ಸ್ತ್ರೀಯರು ಸಮಾನ ಬದುಕು ನಡೆಸಬೇಕು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು: ಸಮಾಜದಲ್ಲಿ ಮಹಿಳೆ ಹಾಗೂ ಪುರುಷ ಇಬ್ಬರು ಸಮಾನರಾಗಿ ಬದುಕಿದರೆ ಮಾತ್ರ ಸ್ವಾವಲಂಬಿ ಜೀವನ ಸಾಗಿಸಲು ಸಾಧ್ಯ ಎಂದು ತರೀಕೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಮಾಜಶಾಸ್ತ್ರ ವಿಭಾಗ ಮುಖ್ಯಸ್ಥೆ ಡಾ. ದ್ರಾಕ್ಷಾಯಣಮ್ಮ ಹೇಳಿದರು.

ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ಮಹಿಳಾ ದೌರ್ಜನ್ಯ ತಡೆ ಹಾಗೂ ಆಂತರಿಕ ಗುಣಮಟ್ಟ ಭರವಸಾ ಕೋಶದ ಆಶ್ರಯದಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಸ್ವಂತ ಉದ್ಯೋಗ ಮಾಹಿತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಹಿಳೆ ಈಗ ಸದೃಢರಾಗಿದ್ದಾಳೆ ಬಲಹೀನಳಾಗಿಲ್ಲ. ಜ್ಯೋತಿಬಾ ಪುಲೆ ಅವರ ಪರಿಶ್ರಮದ ಫಲವಾಗಿ ಈಗ ಮಹಿಳೆಯರು ಶೈಕ್ಷಣಿಕ ಸಾಧನೆ ಮಾಡಿದ್ದಾರೆ. ಸಮಾನತೆ ಎಂದ




ಮಾತ್ರಕ್ಕೆ ಮಹಿಳೆಯ ಸ್ಥಿತಿಗತಿಯನ್ನು ಮಾತ್ರ ಎತ್ತಿ ಹಿಡಿಯಬಾರದು, ಪುರುಷ ಸಹ ಮಹಿಳೆಯೊಂದಿಗೆ ಸಮಾನವಾಗಿ ಬದುಕುವ ಹಕ್ಕು ಇರುತ್ತದೆ. ಮಹಿಳಾ ಸಬಲೀಕರಣ ಎಂದರೆ ಪುರುಷರನ್ನು ದ್ವೇಷಿಸುವುದಲ್ಲ. ಸಮಾಜದಲ್ಲಿ ಪುರುಷನ ಮೇಲೂ ಸಹ ದೌರ್ಜನ್ಯ ನಡೆಯದಂತೆ ಮಹಿಳೆಯರು ಎಚ್ಚರವಹಿಸಬೇಕು. ಸಾಮಾಜಿಕ ಸಾಮರಸ್ಯ ಕಾಪಾಡಲು ಮಹಿಳೆ ಹಾಗೂ ಪುರುಷರು ಹೊಂದಾಣಿಕೆಯಿಂದ ಬದುಕಬೇಕು ಎಂದರು.

ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ ಸಂಯೋಜಕ ಪವನ್ ಕುಮಾರ್ ಮಾತನಾಡಿ, ಸಮಾಜದಲ್ಲಿ ಯಾರು ಸಹ ನಿರುದ್ಯೋಗಿಯಲ್ಲ. ಎಲ್ಲರೂ ಒಂದಲ್ಲ ಒಂದು ಕೆಲಸ ಕಲಿತು ಬದುಕಲು ಸಾಕಷ್ಟು ಅವಕಾಶಗಳಿವೆ. ಕೆನರಾ ಬ್ಯಾಂಕ್ ಹಾಗೂ ಗ್ರಾಮೀಣ ಸ್ವುದ್ಯೋಗ ತರಬೇತಿ ಸಂಸ್ಥೆ ಆಶ್ರಯದಲ್ಲಿ ಯುವಕರಿಗೆ ಸ್ವ ಉದ್ಯೋಗ ತರಬೇತಿ ಹಾಗೂ ಸಾಲಸೌಲಭ್ಯ ಇದೆ. ಯುವಶಕ್ತಿ ನಿರುದ್ಯೋಗ ಸಮಸ್ಯೆ ಅಲ್ಲ, ಕೆಲಸ ಮಾಡುವವನಿಗೆ ನೂರೆಂಟು ಮಾರ್ಗಗಳಿವೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಹಾಸನದ ಗ್ರಾ,ಮೀಣ ಸ್ವ-ಉದ್ಯೋಗ ತರಬೇತಿ ಕೇಂದ್ರದಿಂದ ಊಟ ವಸತಿಯೊಂದಿಗೆ ಸ್ವ ಉದ್ಯೋಗ ತರಬೇತಿ ನೀಡಲಾಗುತ್ತದೆ. ನಂತರ ಬ್ಯಾಂಕಿನಿಂದ ಸಾಲ ಸೌಲಭ್ಯ ಪಡೆದು ಉದ್ದಿಮೆ ಆರಂಬಿಸಿ ಸ್ವಾವಲಂಭಿ ಬದುಕು ಕಂಡು ಕೊಳ್ಳಲು ಅವಕಾಶವಿದೆ. ಆಸಕ್ತರು ದೂರವಾಣಿ ಸಂಖ್ಯೆ08172-297013 ಹಾಗೂ 7353654000 ದೂರವಾಣಿ ಸಂಖ್ಯೆ ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬೇಕು ಎಂದು.

ಪ್ರಾಚಾರ್ಯ ಡಾ.ಜಿ.ಡಿ. ನಾರಾಯಣ ಮಾತನಾಡಿ, ಪ್ರತಿ ಕ್ಷೇತ್ರದಲ್ಲಿಯೂ ಮಹಿಳೆ ಸಾಧನೆಯತ್ತ ಹೆಜ್ಜೆ ಇಟ್ಟಿದ್ದಾಳೆ. ಮಹಿಳೆ ಪುರುಷರು ಸಮಾನವಾಗಿ ಬದುಕುವಂತಾಗಿದೆ. ಸಮಾಜದಲ್ಲಿ ಈಗ ಬೇಧ ಭಾವ ಇಲ್ಲದಂತಾಗಿದೆ ಎಂದರು.

ಪ್ರಾಧ್ಯಾಪಕರಾದ ಡಾ. ಬಿ.ಕೆ. ಶ್ರೀನಿವಾಸ, ಎಸ್. ಪದ್ಮಪ್ರೀಯ, ವಿ. ಡಿಂಪಲ್, ಬಿ.ಕೆ. ಶ್ರೀನಿವಾಸ್, ಡಾ. ಸುಜನ್ ಕುಮಾರ್, ಜೆ. ಸಂತೋಷ್, ಡಾ. ಅಭಿಷೇಕ್, ಕೆ.ಸಿ. ರಾಘವೇಂದ್ರ ಇತರರಿದ್ದರು.

# ಸಾಲ ತೀರಿಸಲು ಚಿನ್ನಾಭರಣ ಕದ್ದಿದ್ದವರ ಬಂಧನ




ಸಕಲೇಶಪುರ: ಸಮೀಪದ ಕೊಡ್ಲಿಪೇಟೆ ಬೆಸ್ಸೂರು ತ್ರಿಪುರ ಸುಂದರಿ ದೇವಸ್ಥಾನಕ್ಕೆ ಬಂದಿದ್ದ ಮಹಿಳೆಯೊಬ್ಬರ ಕೊರಳಿಂದ ಚಿನ್ನದ ಸರ ದೋಚಿದ್ದ ಇಬ್ಬರು ಕಳ್ಳರನ್ನು ಯಸಳೂರು ಠಾಣೆ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಹಾಸನ ತಾಲ್ಲೂಕು ನಾಯಕರಹಳ್ಳಿ ಗ್ರಾಮದ ಕಾರ್ತಿಕ್‌ಗೌಡ ಹಾಗೂ ಎನ್.ಎಸ್. ಶರತ್ ಬಂಧಿತರು. ಕಾರ್ತಿಕ್‌ಗೌಡ ವಾಹನ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದರೆ ಶರತ್ ಮೆಕ್ಯಾಕಿನಿಕ್ ಆಗಿದ್ದಾನೆ. ಆದರೆ ಐಪಿಎಲ್ ಬೆಟ್ಟಿಂಗ್ ಹಿಂದೆ ಬಿದ್ದು ಇಬ್ಬರೂ ವಿಪರೀತ ಸಾಲ ಮಾಡಿಕೊಂಡಿದ್ದರು. ಕುಟುಂಬ ನಿರ್ವಹಣೆ ಹಾಗೂ ಸಾಲ ತೀರಿಸಲು ಹಣದ ಅವಶ್ಯಕತೆ ಹೆಚ್ಚಾದ ಹಿನ್ನಲೆಯಲ್ಲಿ ಕಳ್ಳತನದ ದಾರಿ ಕಂಡುಕೊಂಡಿದ್ದರು. ಬಂಧಿತರಿಂದ 5 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ ಒಂದು ಕೆಟಿಎಂ ಬೈಕ್ ವಶಕ್ಕೆ ಪಡೆಯಲಾಗಿದೆ.

### ದೇವಸ್ಥಾನಗಳೇ ಟಾರ್ಗೆಟ್

ಸಾಲದ ಹೊರೆಯಿಂದ ಪಾರಾಗಲು ಕಳ್ಳತನವೇ ಸರಿಯಾದ ದಾರಿ ಎಂದುಕೊಂಡ ಇಬ್ಬರೂ ಯುವಕರು ಮಹಿಳಾ ಭಕ್ತರು ಹೆಚ್ಚು ಬರುವ ಹಾಗೂ ಜನದಟ್ಟಣೆ ಇಲ್ಲದ ಗ್ರಾಮದ ದೇವಸ್ಥಾನಗಳ ಹುಡುಕಾಟಕ್ಕೆ ಮುಂದಾಗಿದ್ದರು. ಸಕಲೇಶಪುರ, ಕೊಡಗು ಗಡಿವರೆಗೆ ಸಂಚರಿಸಿದ್ದ ಅವರು ಮಾ. 11 ರಂದು ಕೊಡ್ಲಿಪೇಟೆಯ ಬೆಸ್ಸೂರು ತ್ರಿಪುರ ಸುಂದರಿ ದೇವಸ್ಥಾನದ ಹೊರಗೆ ನಿಂತಿದ್ದರು.

ದೇವರ ದರ್ಶನ ಪಡೆದು ಹೊರಬರುವ ಮಹಿಳಾ ಭಕ್ತರನ್ನೇ ನೋಡುತ್ತಾ ಮೈಮೇಲೆ ಹೆಚ್ಚು ಚಿನ್ನಾಭರಣ ಧರಿಸಿದವರ ಮೇಲೆ ಗುರಿಯಿಟ್ಟಿದ್ದರು.

ಅದೇ ವೇಳೆಗೆ ಸುನಿತಾ ಹಾಗೂ ವಿಜಯ ಎಂಬುವರು ತಮ್ಮ ಸ್ಕೂಟಿಯಲ್ಲಿ ದೇವಸ್ಥಾನದಿಂದ ವಾಪಾಸ್ ಬರುತ್ತಿದ್ದಾಗ ಅವರ ಚಿನ್ನಾಭರಣ ದೋಚಲು ಸ್ಕೆಚ್ ಹಾಕಿದ್ದರು. ಹೆನ್ನಲಿ ವರೆಗೆ ಹಿಂಬಾಲಿಸಿಕೊಂಡು ಬಂದ ಯುವಕರು ದಾರಿ ಕೇಳುವ ನೆಪದಲ್ಲಿ ಹತ್ತಿರ ಬಂದು ಮಾತಿಗೆಳೆಯುತ್ತಾರೆ.

ಈ ವೇಳೆ ಬೈಕ್ ಹಿಂಬದಿ ಕುಳಿತಿದ್ದವ ಸುನಿತಾ ಅವರ ಕೊರಳಿಗೆ ಕೈ ಹಾಕಿ 55 ಗ್ರಾಂ ತೂಕದ ಚಿನ್ನದ ಸರ, 15 ಗ್ರಾಂ ತೂಕದ ಚಿನ್ನದ ಚೈನು ಕಿತ್ತುಕೊಂಡು ಪರಾರಿಯಾಗಿದ್ದರು.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಸತತ ಕಾರ್ಯಾಚರಣೆ ಬಳಿಕ ಇಬ್ಬರನ್ನೂ ಬಂಧಿಸಿದ್ದಾರೆ.

# ಅಹಿಂಸೆ ಪ್ರತಿಪಾದಿಸುವ ಕ್ಷೇತ್ರದಲ್ಲಿ ಮಾಂಸದಂಗಡಿಗಳ ದರ್ಬಾರ್

## ಪ್ರವಾಸಿಗರು, ಭಕ್ತರ ಅಸಮಾಧಾನ | ಪಟ್ಟು ಬಿಡದ ವ್ಯಾಪಾರಿಗಳು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ವಿಶ್ವವಿಖ್ಯಾತ ಪ್ರವಾಸಿ ತಾಣ, ಜೈನರ ಧಾರ್ಮಿಕ ಕ್ಷೇತ್ರ ಹಾಗೂ ವಿಶ್ವಕ್ಕೆ ಅಹಿಂಸಾ ಮಂತ್ರ ಬೋಧಿಸಿದ ಜೈನಕಾಶಿ ಶ್ರವಣಬೆಳಗೊಳದ ಮುಖ್ಯ ರಸ್ತೆ ಮತ್ತು ಗಲ್ಲಿಗಳಲ್ಲಿ ಮಾಂಸ ಮಾರಾಟ ಹೆಚ್ಚುತ್ತಿರುವುದು ಪ್ರವಾಸಿಗರು ಹಾಗೂ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಜೈನಕಾಶಿ ಶ್ರವಣಬೆಳಗೊಳ ಕ್ಷೇತ್ರವು ಸುಮಾರು 2500 ವರ್ಷಗಳಿಗೂ ಮೀರಿದ ಐತಿಹಾಸಿಕ ಹಿನ್ನೆಲೆ ಹೊಂದಿದ್ದು ವಿಶ್ವದಾದ್ಯಂತ ಗುರುತಿಸಿಕೊಂಡಿದೆ. ಉತ್ತರ ಭಾರತದಲ್ಲಿ ಕುಂಭಮೇಳ ಪ್ರಸಿದ್ಧಿ ಪಡೆದಿದ್ದರೆ, ದಕ್ಷಿಣ ಭಾರತದಲ್ಲಿ ಇಲ್ಲಿ ನಡೆಯುವ ಮಹಾಮಸ್ತಕಾಭಿಷೇಕ ಪ್ರಖ್ಯಾತಿ ಹೊಂದಿದೆ.

ಪ್ರತಿದಿನ ಈ ಕ್ಷೇತ್ರಕ್ಕೆ ವಿಶ್ವದ ಮೂಲೆ ಮೂಲೆಯಿಂದಲೂ ಪ್ರವಾಸಿಗರು ಆಗಮಿಸಲಿದ್ದು ಶೈಕ್ಷಣಿಕ ಪ್ರವಾಸ ಕೈಗೊಳ್ಳುವ ರಾಜ್ಯ ಹಾಗೂ ಅಕ್ಕಪಕ್ಕದ



ರಾಜ್ಯಗಳ ಶಾಲಾ ವಿದ್ಯಾರ್ಥಿಗಳು ಇಲ್ಲಿಗೆ ಭೇಟಿ ನೀಡುವುದು ಒಂದು ವಿಶೇಷ.

ಇನ್ನು ವಿಶ್ವದ ವಿವಿಧೆಡೆಯಿಂದ ಶ್ರವಣ-ಶ್ರವಣಿಯರು ಹಾಗೂ ಜೈನಮುನಿಗಳು ಈ ಕ್ಷೇತ್ರಕ್ಕೆ ಆಗಮಿಸಿ ಶ್ರೀಮಠದ ಆತಿಥ್ಯ ಪಡೆಯುವುದನ್ನು ಕಾಣಬಹುದಾಗಿದೆ. 12 ವರ್ಷಗಳಿಗೊಮ್ಮೆ ನಡೆಯುವ ಮಹಾಮಸ್ತಕಾಭಿಷೇಕದ ವೇಳೆ ಶ್ರವಣರು, ಪ್ರವಾಸಿಗರು ಹಾಗೂ ಭಕ್ತರ ಸಂಖ್ಯೆ ಕೋಟಿಯನ್ನು ದಾಟಲಿದೆ.

ಆದರೂ ಈ ಪವಿತ್ರ ಜೈನಕಾಶಿ ಮಾತ್ರ ಅಹಿಂಸಾ ಸ್ಥಳವಾಗಿ ಘೋಷಣೆಯಾಗಿಲ್ಲ ಎಂಬುದೇ ದುರಾದೃಷ್ಟಕರ ಸಂಗತಿಯಾಗಿದೆ. ಇಲ್ಲಿ ಪ್ರತಿದಿನ ರಸ್ತೆ ಹಾಗೂ ಬೀದಿ ಬೀದಿಗಳಲ್ಲಿ ಮಾರಾಟ ಪ್ರಕ್ರಿಯೆ ನಿಂತಿಲ್ಲ. ಮಠ ಹಾಗೂ ಭಕ್ತರು ಮಾಂಸ ಮಾರಾಟವನ್ನು ವಿರೋಧಿಸಿದ್ದು ಜಿಲ್ಲಾಧಿಕಾರಿಗಳ ಮೊರೆ ಹೋದರು ಇನ್ನು ಯಾವುದೇ ಪ್ರಯೋಜನವಾಗಿಲ್ಲ ಎನ್ನುತ್ತಾರೆ ಸ್ಥಳೀಯರು.

ಜೈನಕಾಶಿ ಶ್ರವಣಬೆಳಗೊಳದ ಸುತ್ತಲಿನ ಪ್ರದೇಶ ಹಾಗೂ ಗ್ರಾಮಗಳು ಶ್ರವಣಬೆಳಗೊಳ, ಬೆಕ್ಕ, ಸುಂಡಹಳ್ಳಿ ಹಾಗೂ ಕಾಂತರಾಜಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಲಿದ್ದು ಯಾವುದೇ ಗ್ರಾಮ ಪಂಚಾಯಿತಿ ಅಧಿಕಾರಿಗಳು ಇತ್ತ ಗಮನ ಹರಿಸಿ ಕ್ರಮ ಕೈಗೊಳ್ಳುವಲ್ಲಿ ವಿಫಲರಾಗಿದ್ದಾರೆ ಎಂಬುದು ಸ್ಥಳಿಯರ ದೂರಾಗಿದೆ.

ಶ್ರೀ ಕ್ಷೇತ್ರದಿಂದ ಚನ್ನರಾಯಪಟ್ಟಣ, ಕೆ.ಆರ್.ಪೇಟೆ, ಮೈಸೂರು, ನಾಗಮಂಗಲ ಹಾಗೂ ಹಿರೀಸಾವೆ ಸೇರಿದಂತೆ ವಿವಿಧ ಪಟ್ಟಣಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಗಳಿದ್ದು ಎಲ್ಲ ರಸ್ತೆಗಳಲ್ಲಿಯೂ ಮೇಕೆ, ಕುರಿ ಮಾಂಸ ಹಾಗೂ ಕೋಳಿ ಮಾಂಸ ಮಾರಾಟದ ಮಳಿಗೆಗಳು ತಲೆ ಎತ್ತಿವೆ. ಕಳೆದ 4 ತಿಂಗಳ ಹಿಂದೆ ಶ್ರೀ ಮಠವು ಸ್ಥಳೀಯ ಗ್ರಾಮ ಪಂಚಾಯಿತಿ ಹಾಗೂ ಜಿಲ್ಲಾಧಿಕಾರಿ ಕಚೇರಿಗೆ ಈ ಬಗ್ಗೆ ದೂರು ನೀಡಲಾಗಿದ್ದು ಜಿಲ್ಲಾಧಿಕಾರಿ ಆದೇಶ ಹಾಗೂ ಮಾರ್ಗದರ್ಶನದಂತೆ ಒಂದು ತಿಂಗಳ ಒಳಗಾಗಿ ಅಂಡಿಗಳನ್ನು ತೆರವು ಮಾಡುವಂತೆ ಸ್ಥಳಿಯ ಗ್ರಾಮ ಪಂಚಾಯಿತಿಯು ಕೋಳಿ ಹಾಗೂ



ಮಾಂಸದ ಅಂಗಡಿಗಳಿಗೆ ನೋಟಿಸ್ ನೀಡಲಾಗಿದೆ.

ನೋಟಿಸ್ ನೀಡಿ 3 ತಿಂಗಳು ಕಳೆದರೂ ಯಾರು ಸಹ ಅಂಗಡಿ ತೆರವು ಮಾಡಿಲ್ಲ. ಅಲ್ಲದೆ ಮಾಂಸದ ಅಂಗಡಿಗಳಿಗೆಂದು ಪಟ್ಟಣದ ನಾಗಮಂಗಲ ರಸ್ತೆಯಲ್ಲಿ 1 ಎಕರೆ ಜಾಗವನ್ನು ಗುರುತಿಸಲಾಗಿದೆ. ಆದರೆ ಅಂಗಡಿ ಮಾಲೀಕರು ಇಲ್ಲಿಂದ ಅಲ್ಲಿಗೆ ಹೋದರೆ ಗ್ರಾಹಕರು ಬರುವುದಿಲ್ಲ ಎಂಬ ನೆಪ ಹೊಡ್ಡಿ ಇದ್ದಲ್ಲಿಯೇ ಬೇರು ಬಿಟ್ಟಿದ್ದಾರೆ ಎಂದು ಶ್ರೀಮಠದ ಭಕ್ತರೊಬ್ಬರು ಅಸಮಾಧಾನ ಹೊರ ಹಾಕಿದರು.

ಕಲ್ಯಾಣಿ ಸುತ್ತ ಅಕ್ರಮ ತರಕಾರಿ ಅಂಗಡಿಗಳು: ಮಹಾಮಸ್ತಕಾಭಿಷೇಕದ ವೇಳೆ ಬಾಹುಬಲಿಗೆ ಅಭಿಷೇಕ ಮಾಡುವ ಹಾಲು ಹರಿದು ಬಂದು ಕಲ್ಯಾಣಿಗೆ ತುಂಬಿಕೊಂಡು ನೀರು ಬಿಳಿಯಾಗುವುದರಿಂದ ಬೆಳಗೊಳ ಎಂದು ಕರೆಯಲಾಗುತ್ತಿದೆ ಎಂಬ ಇತಿಹಾಸವಿದೆ. ಆದರೆ ಅದೇ ಕಲ್ಯಾಣಿಯ ಕಾಂಪೌಂಡ್ ಗೆ ಬೊಂಬು ಅಳವಡಿಸಿ ತರಕಾರಿ ಮಳಿಗೆಗಳನ್ನು ಮಾಡಿಕೊಂಡಿರುವುದು ಕಲ್ಯಾಣಿಯ ಕಳೆಗುಂದುತ್ತಿದೆ. ಅದರ ಮಹತ್ವ ಮಾಸುತ್ತಿದೆ. ಈಗಾಗಲೇ ಗ್ರಾಮ ಪಂಚಾಯಿತಿಯು ಸಂತೆ ಮೈದಾನದಲ್ಲಿ ಚೆಂದವಾದ ಮಳಿಗೆಗಳನ್ನು ನಿರ್ಮಿಸಿ ತರಕಾರಿ ಮಾರಾಟಕ್ಕೆ ವ್ಯವಸ್ಥೆ ಮಾಡಿದ್ದರೂ ಯಾರೊಬ್ಬರೂ ಸದ್ಬಳಕೆ ಮಾಡಿಕೊಳ್ಳುತ್ತಿಲ್ಲ. ಇದರಿಂದ ಐತಿಹಾಸಿಕ ಕಲ್ಯಾಣಿಯ ಸೌಂದರ್ಯಕ್ಕೂ ದಕ್ಕೆಯಾಗುತ್ತಿದೆ ಎಂದು ಮಠದ ಶ್ರೀಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

### ಶಾಸಕರ ಸಭೆ

ಶಾಸಕ ಸಿ.ಎನ್. ಬಾಲಕೃಷ್ಣ ಇತ್ತೀಚೆಗೆ ಮಾಂಸ ಹಾಗೂ ಕೋಳಿ ಅಂಗಡಿಗಳ ಮಾಲೀಕರು ಮತ್ತು ತರಕಾರಿ ವ್ಯಾಪಾರಿಗಳನ್ನು ಕರೆಸಿ, ಜಾಗ ನಿಗದಿಪಡಿಸಿರುವಲ್ಲಿಗೆ ಸ್ಥಳಾಂತರಗೊಳ್ಳುವಂತೆ ತಿಳಿಹೇಳಿ ಸಂಧಾನ ಮಾಡಿದ್ದರು. ಆದರೂ ನಂತರ ಅದೇ ಪರಿಸ್ಥಿತಿ ಮುಂದುವರಿದಿದೆ ಎನ್ನಲಾಗಿದೆ.

### ಶ್ರವಣರ ಉಪವಾಸ

ಬಾಹುಬಲಿ ನೆಲೆಬೀಡು ಶ್ರೀಕ್ಷೇತ್ರ ಜೈನಕಾಶಿಗೆ ಪ್ರತಿದಿನ ಶ್ರವಣ ಹಾಗೂ ಶ್ರವಣಿಯರು ಆಗಮಿಸುತ್ತಾರೆ. ಜೈನ ಸಂಪ್ರದಾಯದಂತೆ ರಸ್ತೆಯಲ್ಲಿ ಆಗಮಿಸುವ ವೇಳೆ ಮಾಂಸ ನೇತಾಕಿರುವುದು ಇಲ್ಲವೆ ಪ್ರಾಣಿಗಳನ್ನು ಹತ್ಯೆ ಮಾಡುವುದನ್ನು ಕಣ್ಣಿಂದ ನೋಡಿದರೆ ಅಂದು ಅವರು ಸಂಪೂರ್ಣ ಉಪವಾಸ ಇರಬೇಕಿದೆ. ಅದರಂತೆ ಇತ್ತೀಚಿನ ವರ್ಷಗಳಿಂದ ಶ್ರೀಕ್ಷೇತ್ರಕ್ಕೆ ಆಗಮಿಸುವ ಯಾರೊಬ್ಬ ಶ್ರವಣರು ಸಹ ಮೊದಲ ದಿನ ನಮ್ಮ ಆತಿಥ್ಯ ಸ್ವೀಕರಿಸುವುದಿಲ್ಲ. ಹಸಿವಿನೊಂದಿಗೆ ಆ ಒಂದು ದಿನ ಕಳೆಯಲಿದ್ದು ಅದರ ಪಾಪ ನಮ್ಮ ಮಠವನ್ನು ಸುತ್ತಿಕೊಂಡಿದೆ. ಸರ್ಕಾರ ಇತ್ತ ಗಮನಹರಿಸಿ ಶ್ರೀಕ್ಷೇತ್ರವನ್ನು ಅಹಿಂಸ ಜಾಗವೆಂದು ಘೋಷಿಸುವ ಮೂಲಕ ಮಾಂಸ ಮಾರಾಟಕ್ಕೆ ಕಡಿವಾಣ ಹಾಕಬೇಕಿದೆ. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ಅಭಿನವ ಚಾರುಶ್ರೀಗಳು ಎಚ್ಚರಿಕೆ ನೀಡಿದ್ದಾರೆ.

# ಆರೋಗ್ಯವೇ ಶ್ರೀಮಂತಿಕೆ: ಸಿಮೆಂಟ್ ಮಂಜು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ಪ್ರಸ್ತುತ ದಿನಗಳಲ್ಲಿ ಪ್ರತಿಯೊಬ್ಬರೂ ತಮ್ಮ ಆರೋಗ್ಯ ಕಾಪಾಡಿಕೊಳ್ಳುವುದೇ ಶ್ರೀಮಂತಿಕೆ ಎಂದು ಶಾಸಕ ಸಿಮೆಂಟ್ ಮಂಜು ತಿಳಿಸಿದರು.



ಕಣತೂರು ಗ್ರಾಮದಲ್ಲಿ ಸಾರ್ವಜನಿಕ ಆರೋಗ್ಯ ಉಪಕೇಂದ್ರ ಮತ್ತು ಕ್ಷೇಮ ಕೇಂದ್ರದ ನೂತನ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಕಣತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೇಂದ್ರ ಸ್ಥಾನದಲ್ಲಿ ಈ ಭಾಗದ ಜನರಿಗೆ ತುರ್ತು ಆರೋಗ್ಯ ಸೇವೆಯ ಅವಶ್ಯಕತೆ ಇರುವುದನ್ನು ಮನಗಂಡು, ಬಹು ನಿರೀಕ್ಷಿತ ತುರ್ತು ಆರೋಗ್ಯ ಚಿಕಿತ್ಸಾ ಸೌಲಭ್ಯ ದೊರಕಲು ಆರೋಗ್ಯ ಕೇಂದ್ರವನ್ನು ಸ್ಥಾಪನೆ ಮಾಡಲಾಗುತ್ತದೆ. ತ್ವರಿತವಾಗಿ ಗುಣಮಟ್ಟದ ಕಟ್ಟಡವನ್ನು ನಿರ್ಮಾಣ ಮಾಡಿ ಈ ಭಾಗದ ಜನರಿಗೆ ಮನೆ ಬಾಗಿಲಲ್ಲಿ ಉತ್ತಮ ಆರೋಗ್ಯ ಸೇವೆ ದೊರೆಯುವಂತಾಗಲಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಣತೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಪೃಥ್ವಿ ಜಯರಾವ್ ಮಾತನಾಡಿ, ಈ ಭಾಗದ ಜನರ ದಶಕಗಳ ಬೇಡಿಕೆಯನ್ನು ಈಡೇರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ,

ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಮತ್ತು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಪಂಚಾಯಿತಿ ವ್ಯಾಪ್ತಿಯ ಶ್ರೀ ಸಾಮಾನ್ಯರ ಪರವಾಗಿ ಧನ್ಯವಾದ ಅರ್ಪಿಸುತ್ತೇನೆ. ನಮ್ಮ ಪಂಚಾಯಿತಿ ವ್ಯಾಪ್ತಿಯ ಜನರು ಆರೋಗ್ಯ ಸೇವೆಗೆ ಆಲೂರು ಪಟ್ಟಣದ ತಾಲ್ಲೂಕು ಆಸ್ಪತ್ರೆಗೆ ಹೋಗಬೇಕಾಗಿತ್ತು. ಆದರೆ ಈಗ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 65 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ನೂತನ ಉಪ ಕೇಂದ್ರದ ಕಾಮಗಾರಿ ಬೇಗ ಮುಗಿದು ಸ್ಥಳೀಯ ಜನರು ಸಾಮಾನ್ಯರಿಗೆ ಉತ್ತಮ ಆರೋಗ್ಯ ಸೇವೆ ಸಿಗುವಂತಾಗಲಿ ಎಂದರು.

ಪಿಡಿಓ ಪುರುಷೋತ್ತಮ್, ಗ್ರಾಮ ಪಂಚಾಯಿತಿ ಸದಸ್ಯರಾದ ಲಿಂಗರಾಜು, ಜಗದೀಶ್, ಕೃಷ್ಣೇಗೌಡ, ಡೇಗರಾಜು, ನಿರ್ವಾಣಯ್ಯ, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ನಿಸಾರ್ ಫಾತಿಮಾ. ತಾಲ್ಲೂಕು ಆಸ್ಪತ್ರೆ ಮುಖ್ಯ ವೈದ್ಯಾದಿಕಾರಿ ಡಾ. ಜಯಪ್ರಕಾಶ್, ಹಿರಿಯ ಆರೋಗ್ಯ ನಿರೀಕ್ಷಕ ಸತೀಶ್, ಇಂಜಿನಿಯರ್ ನರೇಂದ್ರ ಇತರರಿದ್ದರು.

# ಕೃಷ್ಣೇಗೌಡರ ವಿರುದ್ಧ ರಾಜ್ಯಾಧ್ಯಕ್ಷರಿಗೆ ಪತ್ರ

ಹಾಸನ: ರಾಜ್ಯ ಸರ್ಕಾರಿ ನೌಕರರ ಸಂಘದ ಅರಸೀಕೆರೆ ತಾಲ್ಲೂಕು ಘಟಕದ ನಿರ್ದೇಶಕರಾಗಿರುವ ಈ. ಕೃಷ್ಣೇಗೌಡ ಅವರನ್ನು ಜಿಲ್ಲಾ ಶಾಖೆಯ ಗೌರವಾಧ್ಯಕ್ಷರನ್ನಾಗಿ ನೇಮಿಸಿರುವುದು ಬೈಲಾ ವಿರೋಧಿಯಾಗಿದೆ ಎಂಬ ಅಂಶ ಬಯಲಾಗಿದೆ.

ಬೈಲಾ ಪ್ರಕಾರ ರಾಜ್ಯ ಸಂಘದ ಅನುಮೋದನೆ ಪಡೆದಿಲ್ಲ ಹಾಗೂ ಜಿಲ್ಲಾ ಕಾರ್ಯಕಾರಿ ಸಮಿತಿಯಲ್ಲಿ ಇವರ ಆಯ್ಕೆ ವಿರೋಧ ವ್ಯಕ್ತವಾಗಿದೆ. ಈ ನೇಮಕದ ಕ್ರಮವು ಅಸಿಂಧುವಾಗಿರುವುದರಿಂದ ಕೂಡಲೇ ಕ್ರಮ ಕೈಗೊಳ್ಳುವಂತೆ ರಾಜ್ಯಾಧ್ಯಕ್ಷರು ಪತ್ರ ಬರೆದು ಸೂಚಿಸಿದ್ದಾರೆ.



ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆಯ ಪದಾಧಿಕಾರಿಗಳ ಮನವಿಯನ್ನು ಪರಿಶೀಲಿಸಿರುವ ರಾಜ್ಯಾಧ್ಯಕ್ಷರು, ಯಾವುದೇ ಒಬ್ಬ ಪದಾಧಿಕಾರಿಯನ್ನು ಯಾವುದೇ ಹುದ್ದೆಗೆ ನೇಮಕ ಮಾಡುವಾಗ ಅಥವಾ ನಾಮ ನಿರ್ದೇಶನ ಮಾಡುವಾಗ ಜಿಲ್ಲಾ ಶಾಖೆಯ ನಿರ್ದೇಶಕರ ವಿಶ್ವಾಸದೊಂದಿಗೆ ಹಾಗೂ ರಾಜ್ಯ ಸಂಘದ ಅನುಮೋದನೆಯೊಂದಿಗೆ ಜಾರಿಯಾಗತಕ್ಕದ್ದು ಎಂಬುದಾಗಿ ಬೈಲಾದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಅರಸೀಕೆರೆ ತಾಲ್ಲೂಕು ಸಂಘದ ನಿರ್ದೇಶಕರಾದ ಕೃಷ್ಣೇಗೌಡ ಅವರನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಸಂಘದ ಗೌರವಾಧ್ಯಕ್ಷರನ್ನಾಗಿ ನೇಮಕ ಮಾಡಿರುವುದು ಬೈಲಾ ರೀತಿ ಕ್ರಮಬದ್ಧ ಆಗಿರುವುದಿಲ್ಲ. ತಕ್ಷಣದಿಂದ ಜಾರಿಗೆ ಬರುವಂತೆ ಸದರಿ ನೇಮಕ ತಡೆ ಹಿಡಿಯುವಂತೆ ರಾಜ್ಯಾಧ್ಯಕ್ಷರಾದ ಸಿ.ಎಸ್.ಷಡಾಕ್ಷರಿ ಸೂಚಿಸಿ, ಜಿಲ್ಲಾಧ್ಯಕ್ಷರಿಗೆ ಪತ್ರ ಬರೆದಿದ್ದಾರೆ.

# ಪ್ರಸಕ್ತ ವರ್ಷದಿಂದಲೇ ನುಗ್ಗೇಹಳ್ಳಿ ವಸತಿ ಶಾಲೆ ಆರಂಭ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ನುಗ್ಗೇಹಳ್ಳಿ ಮುರಾರ್ಜಿ ವಸತಿ ಶಾಲೆ ಕಟ್ಟಡ ಕಾಮಗಾರಿ ಪೂರ್ಣವಾಗಿದ್ದು, ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಶಾಲೆ ಆರಂಭಿಸಲಾಗುವುದು ಎಂದು ಜಿಲ್ಲಾಧಿಕಾರಿ ಸಿ. ಸತ್ಯಭಾಮ ಭರವಸೆ ನೀಡಿದರು.

ತಾಲ್ಲೂಕಿನ ಸೋಮವಾರ ಸಂತೆ ಸಮೀಪ ಸುಮಾರು 13 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಆಗಿರುವ ಮುರಾರ್ಜಿ ದೇಸಾಯಿ ವಸತಿ ಶಾಲೆ ವೀಕ್ಷಿಸಿ ಮಾತನಾಡಿದರು.

ಕಂದಾಯ ಇಲಾಖೆಯಿಂದ 8.17 ಎಕರೆ ಸರ್ಕಾರಿ ಭೂಮಿ ಸರ್ವೆ ಮಾಡಿ ಗುತ್ತಿಗೆದಾರರಿಗೆ ವಸತಿ ಶಾಲೆಯ ಕಟ್ಟಡ ನಿರ್ಮಾಣ ಮಾಡಲು ಅವಕಾಶ ನೀಡಲಾಗಿದೆ. ಸರ್ಕಾರ ನಿಗದಿತ ಅವಧಿಯಲ್ಲಿ ಕಾಮಗಾರಿ ಮಾಡಿಸಿದೆ.



ಆದರೆ ಕೃಷಿ ಭೂಮಿಗೆ ತೆರಳಲು ರಸ್ತೆ ನೀಡುವಂತೆ ಕೆಲ ರೈತರು ಬೇಡಿಕೆ ಇಟ್ಟದ್ದರು. ರೈತರೊಬ್ಬರು ತಮ್ಮ ಒಂದು ಎಕರೆ ಕೃಷಿ ಭೂಮಿ ಒತ್ತುವರಿ ಮಾಡಿ ಕಟ್ಟಡ ನಿರ್ಮಾಣ ಮಾಡಿದ್ದಾರೆ ಎಂದು ತಾಲ್ಲೂಕು ಆಡಳಿತಕ್ಕೆ ಅರ್ಜಿ ನೀಡಿದ್ದರು. ಹಾಗಾಗಿ ಸ್ಥಳಕ್ಕೆ ಭೇಟಿ ನೀಡಿ ಸಂಪೂರ್ಣ ಮಾಹಿತಿ ಪಡೆದಿದ್ದೇನೆ ಎಂದರು.

ರೈತರಿಗೆ ಕೃಷಿ ಭೂಮಿ ಮಂಜೂರು ಚೀಟಿ ನೀಡಲಾಗಿದೆ. ಆದರೆ ಇದೇ ಜಾಗದಲ್ಲಿ ಇದೆ ಎನ್ನುವುದಕ್ಕೆ ನಕ್ಷೆ ಇಲ್ಲ, ರೈತ ಕೂಡ ಹದ್ದು ಬಸ್ತು ಮಾಡಿಸಿಕೊಂಡಿಲ್ಲ, ಸ್ಯಾಟ್ ಲೈಟ್ ಸರ್ವೆ ಹಾಗೂ ಭೂ ಮಾಪನ ಇಲಾಖೆಯಡಿ ಸರ್ವೆ ಮಾಡಿದಾಗ ರೈತರ ಯಾವುದೇ ಭೂಮಿ ಒತ್ತುವರಿಯಾಗಿರುವುದು ಕಂಡು ಬಂದಿಲ್ಲ, ಹಾಗಾಗಿ ಗುತ್ತಿಗೆದಾರ ಇಂದಿನಿಂದ ಕಾಮಗಾರಿ ಮಾಡಬಹುದು ಎಂದರು.

ರಾಜ್ಯ ರೈತ ಸಂಘದ ಅಧ್ಯಕ್ಷ ಅರಳಾಪುರ ಮಂಜೇಗೌಡ ಮಾತನಾಡಿ, ನುಗ್ಗೇಹಳ್ಳಿ ಮುರಾರ್ಜಿ ವಸತಿ ಶಾಲೆ ಹಲವು ವರ್ಷದಿಂದ ಗೂರಮಾರನಹಳ್ಳಿ ಮುರಾರ್ಜಿ ವಸತಿ ಶಾಲೆಯಲ್ಲಿ ನಡೆಯುತ್ತಿದೆ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತಿದೆ. 3 ವರ್ಷದಿಂದ ಪಾಳು ಬಿಟ್ಟಿರುವುದು ತರವಲ್ಲ ಎಂದು ಮನವರಿಕೆ ಮಾಡಿದರು.

# ವಾರ್ಷಿಕ ವರದಿ ಸಲ್ಲಿಸಲು ಸೂಚನೆ

ಹಾಸನ: ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯಡಿ ಜಿಲ್ಲೆಯಾದ್ಯಂತ ಆಹಾರ ಪರವಾನಗಿ ಪಡೆದಿರುವ ತಯಾರಕರು/ ರೀ-ಪ್ಯಾಕರ್/ರೀ-ಲೇಬರ್ ಪ್ರತಿ ವರ್ಷ ತಮ್ಮ ವಾರ್ಷಿಕ ವಹಿವಾಟಿನ ವಿವರವನ್ನು ಸಲ್ಲಿಸಲು ತಿಳಿಸಿದೆ.

ಮೇ 31ರ ಒಳಗೆ https:\\foscos.fssai.gov.in ವೆಬ್ ಸೈಟ್‌ನಲ್ಲಿ ತಪ್ಪದೇ ಸಲ್ಲಿಸಬೇಕು. ತಪ್ಪಿದರೆ 15 ಸಾವಿರ ರೂ. ದಂಡ ಪಾವತಿಸಿದ ನಂತರವೇ ಪರವಾನಗಿ ನವೀಕರಿಲಾಗುವುದು ಎಂದು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಅಂಕಿತ ಅಧಿಕಾರಿ ಡಾ. ಇ. ಅನಿಲ್ ಧಾವನ್ ತಿಳಿಸಿದ್ದಾರೆ.

ತಯಾರಕರು/ರೀ-ಪ್ಯಾಕರ್/ರೀ-ಲೇಬರ್‌ದಾರರು ತಮ್ಮ ಆಹಾರ ಪದಾರ್ಥಗಳ ವಿಶ್ಲೇಷಣಾ ವರದಿಯನ್ನು ಪ್ರತಿ 6 ತಿಂಗಳಿಗೊಮ್ಮೆ NABL accredited/ FSSAI ನೋಂದಾಯಿತ ಪ್ರಯೋಗಾಲಯದಲ್ಲಿ ವಿಶ್ಲೇಷಿಸಿ ವರದಿಯನ್ನು ಅಧಿಕೃತ ಅಂತರ್ಜಾಲ ತಾಣದಲ್ಲಿ ತಮ್ಮ ತಮ್ಮ ಲಾಗಿನ್‌ನಲ್ಲಿ ನಮೂದಿಸುವುದು ಕಡ್ಡಾಯ.

ವಾರ್ಷಿಕ ವಹಿವಾಟಿನ ವಿವರವನ್ನು ಹಾಗೂ ಪ್ರಯೋಗಾಲಯ ವಿಶ್ಲೇಷಿಸಿ ವರದಿಯನ್ನು ಸಲ್ಲಿಸಲು ವಿಫಲವಾದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಬಂಧಿಸಿದ ತಯಾರಕರು/ರೀ-ಪ್ಯಾಕರ್/ರೀ-ಲೇಬರ್ ಆಹಾರ ಉದ್ದಿಮೆದಾರರು ಜವಾಬ್ದಾರರಾಗುತ್ತಾರೆ.

ಆಹಾರ ನೋಂದಣಿ/ಪರವಾನಗಿ ಪಡೆಯದೇ ವ್ಯಾಪಾರ ವಹಿವಾಟು ನಡೆಸುವವರು ತಕ್ಷಣದಲ್ಲೇ ಇಲಾಖೆಯಿಂದ ಆಹಾರ ನೋಂದಣಿ/ಪರವಾನಗಿಯನ್ನು ಪಡೆದುಕೊಳ್ಳುವುದು, ತಪ್ಪಿದಲ್ಲಿ ಕಾಯ್ದೆಯಡಿ ನೋಟೀಸ್ ಮತ್ತು ದಂಡವನ್ನು ವಿಧಿಸಲಾಗುವುದು ಎಂದು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಅಂಕಿತ ಅಧಿಕಾರಿ ತಿಳಿಸಿದ್ದಾರೆ.

**DOCUMENT LOST**

1, Varalakshmi Murthy W/o Murthy, aged about 55 years, Resident of Door No.13/1, Palyam, Thalli Road, Hosur Taluk, Krishnagiri District, Tamilnadu State, do hereby solemnly affirm and state on oath as follows:-
I lost my vanity bag while traveling on a KSRTC bus from Bengaluru to Sakleshpur it had the original Registered sale deed bearing document No. 37/2007 and bearing Survey No. 565/2. Since the original document was inside the lost vanity bag. If I ever recover the lost documents, I assure that I will not misuse them in any way and will return them to the concerned department. I confirm that all the details provided in this affidavit are true and correct

Notary By: Kambegowda , Hassan
Date: 27/03/2025
Place: Hassan
Contact : 9944134439

# ಶಿವಕುಮಾರ ಶ್ರೀ ಹಾಕಿಕೊಟ್ಟ ಮಾರ್ಗದಲ್ಲಿ ಸಾಗೋಣ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೊಳೆನರಸೀಪುರ: ತ್ರಿವಿಧ ದಾಸೋಹಿ ಸಿದ್ದಗಂಗಾ ಕ್ಷೇತ್ರದ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ಸಾಗಬೇಕು ಎಂದು ಜೆಎಂಎಫ್‌ಸಿ ಹಿರಿಯ ನ್ಯಾಯಾಧೀಶೆ ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್ ಹೇಳಿದರು.

ಪಟ್ಟಣದ ನ್ಯಾಯಾಲಯ ಆವರಣದಲ್ಲಿ ತ್ರಿವಿಧ ದಾಸೋಹಿ ಡಾ. ಶ್ರೀ ಶಿವಕುಮಾರಸ್ವಾಮಿ ಜಯಂತಿಯಲ್ಲಿ ಮಾತನಾಡಿ, ಸಿದ್ದಗಂಗಾ ಶ್ರೀಗಳು ಸ್ವಲ್ಪವೂ ಲೋಪವಿಲ್ಲದೆ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡವರು. ಸಮಾಜದ ಉನ್ನತಿಗೆ ಶ್ರಮಿಸುವ ಮಹನೀಯರನ್ನು ನೆನೆಯುವುದು ನಮ್ಮ ಭಾಗ್ಯ. ನಡೆದಾಡುವ ದೇವರೆನಿಸಿಕೊಂಡ ಅವರನ್ನು ಕಂಡು ಆಶೀರ್ವಾದ ಪಡೆದಿರುವ ನಾವು ಧನ್ಯರು ಎಂದರು.

ನಿವೃತ್ತ ಉಪನ್ಯಾಸಕ ಪ್ರಭುಶಂಕರ್ ಮಾತನಾಡಿ, ಸಿದ್ದಗಂಗಾ ಮಠದ ಮಹತ್ಕಾರ್ಯಗಳು ಇಲ್ಲದಿದ್ದರೆ ನಾಡು ಶಿಕ್ಷಣ ಪ್ರಗತಿಯಿಂದ ಹಿಂದುಳಿಯುತ್ತಿತ್ತು. ಜಾತಿ, ಧರ್ಮ ಬೇಧ ಇಲ್ಲದೆ ವರ್ಷಕ್ಕೆ ಸಾವಿರಾರು ಬಡ ಮಕ್ಕಳ ಉತ್ತಮ ಭವಿಷ್ಯಕ್ಕೆ ಸಿದ್ದಗಂಗಾ ಮಠ ಇಂದಿಗೂ ಸಾಕ್ಷಿಯಾಗಿದೆ. ಇತ್ತೀಚೆಗೆ ಶ್ರೀಗಳ ಕನಸಿನಂತೆ ಆರೋಗ್ಯ ಸೇವೆ ನೀಡಲೂ ಸಹ ಮುಂದಾಗಿದೆ. ಪ್ರತಿನಿತ್ಯ 10 ಸಾವಿರ ಮಕ್ಕಳು ಊಟ ವಸತಿ ಪಡೆದು ವ್ಯಾಸಂಗ ನಡೆಸಿದ್ದಾರೆ. ಒಂದು ಹೊತ್ತಿನ ಊಟಕ್ಕೆ 2.5 ಲಕ್ಷ ರೂ. ಖರ್ಚು ಮಾಡಲಾಗುತ್ತಿದೆ. ಪ್ರಸಿದ್ದ ದೇಗುಲಗಳಲ್ಲಿ ದರ್ಶನಕ್ಕಾಗಿ ಭಕ್ತರು ಸಾಲುಗಟ್ಟುತ್ತಾರೆ. ಸಿದ್ದಗಂಗಾ ಮಠದಲ್ಲಿ ದಾನಿಗಳು ಗಂಟೆಗಟ್ಟಲೇ ನಿಂತು ದೇಣಿಗೆ ನೀಡುತ್ತಾರೆ. ಅದಕ್ಕೆ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಧರ್ಮ ಸಹಿಷ್ಣುತೆ ಹಾಗು ಸಾಮಾಜಿಕ ಚಿಂತನೆಯೇ ಕಾರಣ ಎಂದರು.

ಶ್ರೀಗಳ ಹೆಸರಿನಲ್ಲಿ ಅನ್ನದಾಸೋಹ ನಡೆಸಿ, ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು. ಸಿವಿಲ್ ನ್ಯಾಯಾಧೀಶೆ ಚೇತನಾ, ಅಧಿಕ ಸಿವಿಲ್ ನ್ಯಾಯಾಧೀಶೆ ಐಶ್ವರ್ಯ, ವಕೀಲರ ಸಂಘದ ಅಧ್ಯಕ್ಷ ಎಂ.ವಿ. ಶಿವಕುಮಾರ್, ಕಾರ್ಯದರ್ಶಿ ಸತೀಶ್, ಸರ್ಕಾರಿ ಅಭಿಯೋಜಿಕಿ ಶಿರೀನ್, ಶಿವರುದ್ರಪ್ಪ, ಸುನೀಲ್ ಉಪಸ್ಥಿತರಿದ್ದರು.

# ಬಾಲ್ಯ ಅದೆಷ್ಟು ಚೆಂದವಿತ್ತು ನೆನಪಿದೆಯಾ?

– ರಜನೀಶ್ ಸಾಗರ



- ಹಿಂದಿನ ಸಂಚಿಕೆಯಿಂದ

ವಾರಿಗೆಯ ಹುಡುಗರ ಜೊತೆ ಚಿನ್ನಿದಾಂಡು, ಬುಗುರಿ, ಗೋಲಿ ಮತ್ತು ಕ್ರಿಕೆಟ್ ಆಡುತ್ತಿದ್ದೆವು. ನಮ್ಮ ಮನೆಯಲ್ಲೋಂದೆ ಬ್ಲ್ಯಾಕ್ ಅಂಡ್ ವೈಟ್ ಟಿವಿ ಇದ್ದುದರಿಂದ ಮಹಾಭಾರತ ನೋಡಲು ಬರುವ ಹಿಂಡು ಹಿಂಡು ಹುಡುಗರನ್ನು ಸರಿಯಾಗಿ ಕೂರಿಸುವ, ಗಲಾಟೆ ಮಾಡಿದರೆ ಗದರಿಸುವ ವಿಶೇಷ ಹಕ್ಕು ನಮ್ಮದಾಗಿರುತ್ತಿತ್ತು. ಸಂಜೆಯ ವೇಳೆ ಚಿತ್ರಹಾರ ನೋಡಲು ಕೊನೆ ಪಕ್ಷ ವಿದ್ಯುತ್ ಏಳೆಂಟು ಬಾರಿಯಾದರೂ ಹೋಗಿ ಬಂದು ಮಾಡುತಿತ್ತು.

ಅಕ್ಕನ ಮಕ್ಕಳು ಬಂದಿದಾರೆ ಅಂತ ಊರಲ್ಲಿದ್ದ ಸೋದರ ಮಾಮ ರುಚಿಯಾದ ಮಾವಿನ ಹಣ್ಣುಗಳನ್ನು ಬುಟ್ಟಿಗಟ್ಟಲೇ ತಂದಿಡುತ್ತಿದ್ದ. ದಾವಣಗೆರೆಯ ಹೆಸರಾಂತ ಬೆಣ್ಣೆದೋಸೆ ಹೋಟೆಲ್‌ಗಳಲ್ಲಿ ಮಸಾಲೆ ದೋಸೆ ತಿನ್ನಿಸುತ್ತಿದ್ದ. ಆಧುನಿಕ ಶೈಲಿಯ ಕಟಿಂಗ್ ಶಾಪ್‌ಗಳಲ್ಲಿ ಚಂದನೆಯ ಕಟಿಂಗ್ ಮಾಡಿಸುತ್ತಿದ್ದ. ದೊಡ್ಡ ದೊಡ್ಡ ಟಾಕೀಸುಗಳಲ್ಲಿ ಒಂದು ಸಿನಿಮಾ, ಜೀವನ ಪಾವನ.

ಹೊಲಗಳಲ್ಲಿ ಶೇಂಗಾ ಗಿಡ ಕಿತ್ತುಮುಗಿಸಿದ ಮೇಲೆ ನಾವು ಶೇಂಗಾ ಆರಿಸಲು ಹೋಗುತ್ತಿದ್ದೆವು. ಹೊಟ್ಟೆಗೆ ಚೀಲ ಕಟ್ಟಿಕೊಂಡು ಸಾಲು ಹಿಡಿದು ಹೊರಟರೆ ಸಂಜೆಯ ವೇಳೆಗೆ ಏಳೆಂಟು ಸೇರು ನಮ್ಮ ಲೆಕ್ಕದಲ್ಲಿರುತ್ತಿದ್ದವು. ಹುಣಸೆ ಮರದಿಂದ ಹುಣಸೆ ಹಣ್ಣು ಬಡಿದುಕೊಂಡು ಬಂದರೆ, ಒಂದು ಮರದ ಕೊರಡು ಇಟ್ಟುಕೊಂಡು, ಒಂದಡಿ ಉದ್ದದ ದೊಣ್ಣೆಯಿಂದ ಹುಣಸೆ ಹಣ್ಣು ಬಡಿದು, ಸಿಪ್ಪೆ ಉದುರಿಸಿ, ಬೀಜ ಹೊರ ತಗೆದು, ನಾರು ಕಿತ್ತುಹಾಕುತ್ತಿದ್ದೆವು. ಕೆಲಸ ಮಾಡಿದ್ದಕ್ಕೆ ಅವ್ವನೊ, ಮಾವನೊ ಹಣ ಕೊಟ್ಟರೆ, ಸಣ್ಣ ಸಣ್ಣ ಹೋಟೆಲ್‌ಗಳಿಗೆ ಹೋಗಿ ಕಾರಮಂಡಕ್ಕಿ, ಮೆಣಸಿನ ಕಾಯಿ ಬೋಂಡಾ ತಂದು ಹಂಚಿಕೊಂಡು ತಿನ್ನುತ್ತಿದ್ದೆವು. ಏಳೆಂಟು ಸೇರಿನ ಹಪ್ಪಳದ ಮುದ್ದೆ ಮಾಡಿ ಹೆಣ್ಣುಮಕ್ಕಳು ಲಟ್ಟಿಸುತ್ತಿದ್ದರೆ,

ಹಪ್ಪಳಗಳನ್ನು ತಂದು ಹಳೇ ಸೀರೆಯ ಮೇಲೆ ಒಣಗಲು ಹಾಕಿ, ಕಾಗೆ ಕದಿಯದಂತೆ ಕಾಯುವ ಕಾಯಕ. ಬಟ್ಟೆಬರೆ ತೊಳೆಯಲು ಕಾಲುವೆಗೆ ಚಿಕ್ಕಮ್ಮಂದಿರು ಹೊರಟರೆ ಬಟ್ಟೆ ಗಂಟು ಹೊತ್ತು, ತೊಳೆದ ಬಟ್ಟೆಗಳನ್ನು ಒಣಗಲು ಹಾಕಿ, ಅವುಗಳು ಒಣಗುವ ವೇಳೆ ಕಲಿತ ಈಜು ಹೊಡೆದು, ತಗೆದುಕೊಂಡು ಹೋಗಿದ್ದ ಬುತ್ತಿ ಉಣ್ಣುವ ಸಡಗರ. ಬೆಳ ಬೆಳಗ್ಗನೇ ತೋಟದಲ್ಲಿ ತೆಂಗಿನ ಕಾಯಿ ಆರಿಸಲು ಹೋಗಿದ್ದು, ಮೆಣಸಿನ



ಕಾಯಿ ಬಿಡಿಸಿದ್ದು, ಭತ್ತದ ಹುಲ್ಲಿನಲ್ಲಿ ಆಡಿ ಮೈಕೈ ಕಡಿಸಿಕೊಂಡಿದ್ದು, ಹೊಸ ಹುಣಸೇ ಹಣ್ಣು ಜೀರಿಗೆ, ಉಪ್ಪು ಮೆಣಸು ಸೇರಿಸಿ ಕುಟ್ಟುತ್ತಿದ್ದ ಕುಟ್ಟುಂಡಿ, ಕೇರಿ ತುಂಬಾ ಸಂಬಂಧಿಕರ ಮನೆಗಳಲ್ಲಿನ ಮದುವೆಗೆ ಊಟ ತಿಂಡಿ ಬಡಿಸುವ ಜವಾಬ್ದಾರಿ,,,,, ಒಂದೇ ಎರಡೇ ಮುಗಿಯದು. ಆ ಎಲ್ಲಾ ರಸಗಳಿಗೆಗಳು ನನ್ನ ಮಗಳಿಗೆ ಸಿಗಲೇಬೇಕು.

ಯಾವ ಬೇಸಿಗೆ ಶಿಬಿರಕ್ಕೂ ಸೇರಿಸದೇ ಅಜ್ಜಿ ಮನೆಗೆ ಕಳಿಸುವೆ. ಅಲ್ಲಿ ಅವಳಿಗೆ ಸಂಬಂಧಗಳ ಪರಿಚಯವಾಗಲಿ. ಪಾತ್ರೆ ತೊಳೆಯಲಿ, ಬಟ್ಟೆ ತೊಳೆಯಲಿ, ತೋಟ ಗದ್ದೆಗಳಿಗೆ ಹೋಗಿಬರಲಿ, ವಾರಿಗೆಯ ಮಕ್ಕಳ ಜೊತೆ ಬಿಸಲಲ್ಲಿ ಆಡಿ ಬಸವಳಿಯಲಿ ರಜೆ ಮಜವಾಗಿ ಕಳೆದು ಸವಿ ನೆನಪುಗಳ ಮೂಟೆ ಹೊತ್ತು, ಚೈತನ್ಯ ಮೈಗೂಡಿಸಿಕೊಂಡು ಬರಲಿ.

# ಏ. 22ಕ್ಕೆ ಕುಂದು ಕೊರತೆ ಅಹವಾಲು ಸಭೆ

ಹಾಸನ: ಜಿಲ್ಲಾ ಮಟ್ಟದ ಪರಿಶಿಷ್ಟ ಜಾತಿ/ವರ್ಗ ಮತ್ತು ಅಲೆಮಾರಿ ಅರೆ ಅಲೆಮಾರಿ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಕುಂದುಕೊರತೆ ಸಭೆಯನ್ನು ಏ. 22ರ ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಜಿಲ್ಲಾಧಿಕಾರಿ ಸಿ. ಸತ್ಯಭಾಮ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪಂಗಡ ಸಮುದಾಯ ಜನರು ಏ. 17ರ ಒಳಗೆ ಸಮಾಜ ಕಲ್ಯಾಣ ಉಪನಿರ್ದೇಶಕರ ಕಚೇರಿಗೆ ತಲುಪಿಸಬೇಕು ಎಂದು ತಿಳಿಸಿದೆ.

# ಇತಿಹಾಸದಲ್ಲಿ ಈ ದಿನ

## ಏಪ್ರಿಲ್ 9

- **1867:** ಪ್ರಸಿದ್ಧ ಲೇಖಕ, ಪ್ರವಾಸಿ ಮತ್ತು ಬೌದ್ಧ ತತ್ವಜ್ಞಾನಿ ರಾಹುಲ ಸಾಂಕೃತ್ಯಾಯನ್ ಉತ್ತರ ಪ್ರದೇಶದಲ್ಲಿ ಜನಿಸಿದರು. ಅವರು ಭಾರತೀಯ ಸಾಹಿತ್ಯಕ್ಕೆ ಪ್ರವಾಸ ಕಥನಗಳು ಮತ್ತು ಇತಿಹಾಸ ಸಂಶೋಧನೆಗಳ ಮೂಲಕ ಅಮೂಲ್ಯ ಕೊಡುಗೆ ನೀಡಿದರು.
- **1919:** ಪಂಜಾಬ್‌ನಲ್ಲಿ ರೌಲಟ್ ಕಾಯಿದೆಯ ವಿರುದ್ಧ ತೀವ್ರ ಪ್ರತಿಭಟನೆಗಳು ನಡೆದವು. ಈ ಪ್ರತಿಭಟನೆಗಳು ಏ. 13ರಂದು ಜಲಿಯನ್ ವಾಲಾಬಾಗ್ ಹತ್ಯಾಕಾಂಡಕ್ಕೆ ದಾರಿ ಮಾಡಿಕೊಟ್ಟವು.
- **1965:** ಗುಜರಾತ್‌ನ ಕಛ್ ಆಫ್ ರಣ್ ಪ್ರದೇಶದಲ್ಲಿ ಸಣ್ಣ ಪ್ರಮಾಣದ ಸಂಘರ್ಷ ಆರಂಭವಾಯಿತು. ಇದು ನಂತರ ಸೆಪ್ಟೆಂಬರ್‌ನಲ್ಲಿ ಪೂರ್ಣ ಪ್ರಮಾಣದ ಯುದ್ಧವಾಯಿತು.
- ಜಾಗತಿಕ ಮಟ್ಟದ ಘಟನೆಗಳು: **1860:** ಫ್ರಾನ್ಸ್‌ನ ಎಡ್ವಾರ್ಡ್-ಲಿಯೋನ್ ಸ್ಕಾಟ್ ಫೊನೊಟೊಗ್ರಾಫ್ ಮೂಲಕ ಮಾನವ ಧ್ವನಿಯನ್ನು ದಾಖಲಿಸಿದ ಮೊದಲ ವ್ಯಕ್ತಿಯಾಗಿ ಗುರುತಿಸಲ್ಪಟ್ಟರು.
- **1940:** ನಾಜಿ ಜರ್ಮನಿಯು ಡೆನ್ಮಾರ್ಕ್ ಮತ್ತು ನಾರ್ವೆ ಮೇಲೆ ಆಕ್ರಮಣ ನಡೆಸಿತು. ಇದು ಯುರೋಪಿನಲ್ಲಿನ ವಿಸ್ತರಣೆಗಾಗಿ ಮಹತ್ವದ ಹೆಜ್ಜೆಯಾಗಿತ್ತು.
- **1957:** ಬಿಕ್ಕಟ್ಟಿನಿಂದ ಮುಚ್ಚಲ್ಪಟ್ಟದ್ದ ಸುಯೆಜ್ ಕಾಲುವೆ ಮರು ತೆರೆದಿತು. ಜಾಗತಿಕ ವ್ಯಾಪಾರಕ್ಕೆ ಇದು ಪ್ರಮುಖ ಬೆಳವಣಿಗೆ.
- ಜನನ: **1336:** ಮಧ್ಯ ಏಷ್ಯಾದ ಪ್ರಸಿದ್ಧ ಟರ್ಕಿಕ್ ಆಕ್ರಮಣಕಾರ ಹಾಗೂ ತೈಮೂರಿಡ್ ಸಾಮ್ರಾಜ್ಯದ ಸ್ಥಾಪಕ ತೈಮೂರ್ (ತೈಮೂರ್ ಲಂಗ್)
- ಮರಣ: **1626:** ಇಂಗ್ಲಿಷ್ ತತ್ವಜ್ಞಾನಿ, ಆಧುನಿಕ ವೈಜ್ಞಾನಿಕ ವಿಧಾನಗಳ ಪಿತಾಮಹ ಸರ್ ಫ್ರಾನ್ಸಿಸ್ ಬೇಕನ್

# ಒಂದು ಪಿಯುಸಿ ರಿಸಲ್ಟ್ ಕಥೆ!



– ಡಾ. ಅಶೋಕ್ ಹನ್ಯಾಳ್, ಜಿಲ್ಲಾ ಪಂಚಾಯಿತಿ ಹಾಸನ

ಅಂದು ರಿಸಲ್ಟ್ ಬಂದ ಮಾರನೇ ದಿನ, ಬೆಳಿಗ್ಗೆ ಎದ್ದಾಗ ನಮ್ಮ ಪಕ್ಕದ ಫ್ಲಾಟ್‌ನಿಂದ ಎಲ್ಲರೂ ಜೋರಾಗಿ ಅಳುವ ಸದ್ದು ಕೇಳಿಸುತಿತ್ತು. ಏನ್ ಆಯ್ತು ಅಂತ ನೋಡೋಕೆ ಹೋದೆ. ವಿಷಯ ಕೇಳಿ ಒಂದು ಕ್ಷಣ ಶಾಕ್ ಆದೆ. ನೆನ್ನೆ ವರೆಗೂ ತುಂಬಾ ಚೆನ್ನಾಗಿ ಲವಲವಿಕೆ ಇಂದ ಇದ್ದ ಹುಡುಗ ಕುಮಾರ (ಕಾಲ್ಪನಿಕ ಹೆಸರು) ಸುಸೈಡ್ ಮಾಡ್ಕೊಂಡ ಅಂತ ತಿಳ್ದು ನಿಂತ ನೆಲ ಕುಸಿದ ಹಾಗಾಯಿತು. ಪಿಯುಸಿಯಲ್ಲಿ ಒಂದು ಸಬ್ಜೆಕ್ಟ್ ಫೇಲ್ ಆದ ಕಾರಣ ಮನೇಲಿ ಬೈದ್ರು ಅಂತ ಅವಮಾನ ತಾಳಲಾರದೆ ಆತ್ಮಹತ್ಯೆಗೆ ಶರಣಾಗಿದ್ದ. ಛೇ ಇಷ್ಟು ಸಣ್ಣ ವಿಷಯಕ್ಕೆ ಈಗಿನ ವಿದ್ಯಾರ್ಥಿಗಳು ಇಷ್ಟು ದೊಡ್ಡ ನಿರ್ಧಾರ ತೊಗೊಳೋದು ನೋಡಿ ಬೇಜಾರ್ ಅಯ್ತು. ಹಾಗೆ ಬಂದು ಮನೆಯ ಒಂದು ಮೇಲೆ ಕುಳಿತೆ. ಸುಮ್ನೆ ಹಾಗೆ ಕಣ್ ಮುಚ್ಚಿದೆ, ಹಿಂದಿನದೆಲ್ಲ ನೆನಪಾಯ್ತು...

2002ರಲ್ಲಿ ದ್ವಿತೀಯ ಪಿಯುಸಿ ಫೇಲ್ ಆದ ಮೇಲೆ ಊರಲ್ಲಿ ಇದ್ದು ಏನ್ ಕೆಲಸ ಮಾಡೋದು ಅಂತ ಗೊತ್ತಾಗದೆ, ಕೆಟ್ಟು ಪಟ್ಟಣ ಸೇರು ಅನ್ನೋ ಹಾಗೆ ನಾನು ಬೆಂಗಳೂರು ಸೇರಿದೆ. 5 ವರ್ಷ ಮಾಡದ ಕೆಲಸವಿಲ್ಲ, ಅನುಭವಿಸದ ಅವಮಾನವಿಲ್ಲ. ಓದಿದ್ ಎಸ್‌ಎಸ್‌ಎಲ್‌ಸಿಗೆ ನನಗೆ ಇನ್ಯಾವ ಕೆಲಸ ಸಿಗುತ್ತೆ ಅಂತ ಸಿಕ್ಕಿದ್ ಕೆಲಸ ಮಾಡ್ಕೊಂಡು ಕಾಲ ತಳ್ತಿದ್ದೆ. ಕಾರ್ ಷೋರೂಮ್, ಆಸ್ಪತ್ರೆ, ಡೈರೆಕ್ಟ್ ಹೀಗೆ ಎಲ್ಲಿ ಕೆಲಸ ಸಿಗುತ್ತೋ ಅಲ್ಲಿ ಕೆಲಸ ಮಾಡ್ಕೊಂಡು ಹೋಗ್ತಿದ್ದೆ. ಪ್ರತಿ ವರ್ಷ ತಪ್ಪದೆ ಎಕ್ಸಾಮ್ ಬರಿತಿದ್ದೆ, ಹಾಗೆ ಫೇಲ್ ಆಗ್ತಿದ್ದೆ.

ಜೀವನ ಎಲ್ಲರಿಗೂ ಪಾಠ ಕಲ್ಸುತ್ತೆ, ಆದ್ರೆ ಜೀವನ ಕಲ್ಸಿದ್ದ ಪಾಠಕ್ಕಿಂತ, ನಂಬಿದವರು ಕಲಿಸಿದ ಪಾಠವೇ ಹೆಚ್ಚು. ನನಗಿಂತ ಚಿಕ್ಕವರೆಲ್ಲ ಚೆನ್ನಾಗಿ ಓದಿ ಒಳ್ಳೆ ಒಳ್ಳೆ ಕೆಲಸ ಸೇರ್ಕೊತಾ ಇದ್ರು. ನಾನು ನನ್ ಬಗ್ಗೆ ಯೋಚನೆ ಮಾಡಿದಾಗ ನಾನು 5 ವರ್ಷ ಹಿಂದೆ ಎಲ್ಲಿ ಇದ್ನೋ ಅಲ್ಲೇ ಇದೀನಿ ಅನ್ನುಸ್ತು. ನನ್ ಮುಂದೆನೆ ಹೋಗ್ತಾ ಇಲ್ಲ ಅಷ್ಟೊತ್ತಿಗೆ ನನ್ನ ತಮ್ಮ ಇಂಜಿನಿಯರ್ ಮುಗಿಸಿ ಬಾಂಬೆಯಲ್ಲಿ ಕೆಲಸಕ್ಕೆ ಸೇರಿದ್ದ. ಒಂದು ಕಡೆ ತಮ್ಮ ಸೆಟ್ಲ್ ಆದ ಅಂತಾ ಸಂತೋಷ ಇನ್ನೊಂದ್ ಕಡೆ ಮುಂದೆ ನನ್ ಕಥೆ ಏನು ಅನ್ನೋ ಚಿಂತೆ ಶುರು ಆಯ್ತು. ಸರಿ, ಏನಾದ್ರು ಮಾಡಬೇಕು ಜೀವನದಲ್ಲಿ ಅಂತ ಅನ್ಕೊಂಡೆ ಆದ್ರೆ, ಏನ್ ಮಾಡೋದು? ಯಾವುದಾದ್ರೂ ಬ್ಯುಸಿನೆಸ್ ಸ್ಟಾರ್ಟ್ ಮಾಡಣ ಅಂದ್ರೆ ದುಡ್ಡಿಲ್ಲ ಕೆಲಸ ಮಾಡೋಣ ಅಂದ್ರೆ ಒಳ್ಳೆ ಕ್ವಾಲಿಫಿಕೇಶನ್ ಇಲ್ಲ. ಮೊದಲು ಪಿಯುಸಿ ಪಾಸ್ ಮಾಡಣ ಆಮೇಲೆ ನೋಡಣ ಅಂತ ಇನ್ನೊಂದ್ ಸಲ ಪರೀಕ್ಷೆ ಕಟ್ಟೋಕೆ ಹೋದೆ ಕಾಲೇಜಿನ ಪ್ರಾಂಶುಪಾಲರು ನನ್ನನ್ನು ನೋಡಿ ಇನ್ನು ಎಷ್ಟ ಸಲ ಪರೀಕ್ಷೆ ಬರೀಬೇಕು ಅಂದುಕೊಂಡಿದಿಯಪ್ಪ ಅಂದ್ರು. ಆ ಸಲ ಕಷ್ಟ ಪಟ್ಟು ಓದಿದೆ ಕೊನೆಗೂ ಜಸ್ಟ್ ಪಾಸ್ ಆಯ್ತು.



> ಪಿಯುಸಿ ಫಲಿತಾಂಶ ನಿನ್ನೆಯಷ್ಟೇ ಪ್ರಕಟವಾಗಿದೆ. ಉತ್ತಮ ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ಆಲ್ ದಿ ಬೆಸ್ಟ್. ಅದೇ ರೀತಿ ಕೆಲವರು ಅನುತ್ತೀರ್ಣರಾಗಿದ್ದಿರಿ. ಪಿಯುಸಿ ಫೇಲ್ ಆದರೆ ಜೀವನವೇ ಮುಗಿಯಿತು ಎನ್ನುವುದು ಬೇಡ. ಈ ಪರೀಕ್ಷೆ ಫೇಲ್ ಆಗಿದ್ದ ವ್ಯಕ್ತಿಯೊಬ್ಬರ ಯಶೋಗಾಥೆ ಇದು.

ಸರಿ ಮುಗಿತು ಮುಂದೇನು ಅನ್ನೋ ಪ್ರಶ್ನೆ ಸ್ಟಾರ್ಟ್ ಆಯ್ತು. ಸರಿ ಒಂದ್ ಡಿಗ್ರಿ ಮಾಡಣ ಆ ಮೇಲೆ ಡಿಗ್ರಿ ಮೇಲೆ ಒಳ್ಳೆ ಕೆಲಸ ಸಿಗುತ್ತೆ ಅಂತ ಕಾಲೇಜ್ ಅಲ್ಲಿ ಡಿಗ್ರಿ ಕಟ್ಟಿದೆ. ಬೆಳಿಗ್ಗೆ ಕಾಲೇಜು ನಂತರ ಸಾಯಂಕಾಲ ಕೆಲಸ, ಒಂಥರಾ ಬ್ಯುಸಿ ಆಗಿತ್ತು ಲೈಫು. ನಂಗು ಏನೋ ಒಂದು ಸಮಾಧಾನ ಏನೂ ಮಾಡದೇ ಇರೋಕ್ಕಿಂತ ನಾನು ಏನೋ ಒಂದ್ ಮಾಡ್ತಾ ಇದೀನಿ ಸುಮ್ನೆ ಇಲ್ಲ ಅಂತ.

ಡಿಗ್ರಿ ಓದೋವಾಗ ಓದಿನ ಮೇಲೆ ಆಸಕ್ತಿ ಜಾಸ್ತಿ ಆಗೋಕೆ ಶುರುವಾಯ್ತು. ಡಿಗ್ರಿ ನಂತರ ಎಂಬಿಎ ಮಾಡಿದೆ ಡಿಸ್ಟಿಂಕ್ಷನ್‌ನಲ್ಲಿ ಪಾಸ್ ಆದೆ. ಹಾಗೆ ನಾನು ಓದಿದ್ ಕಾಲೇಜ್ ಅಲ್ಲೇ ಸಹಾಯಕ ಪ್ರಾಧ್ಯಾಪಕನಾಗಿ ಕೆಲಸನೂ ಸಿಕ್ತು. ನಂತರ ಅಲ್ಲಿಗೆ ನಿಲ್ಲದ ನಾನು ಎಂಕಾಂ ಮಾಡಿದೆ. ಕೊನೆಗೆ ಪಿ.ಹೆಚ್‌ಡಿ ಸಹ ಮಾಡಿ ಡಾಕ್ಟ್ರೇಟ್ ಪದವಿ ತಗೊಂಡೆ. ಈ ನಡುವೆ ಎಕ್ಸಾಮ್ ತಗೊಂಡು ಗ್ರೂಪ್ ಆಫೀಸರ್ ಆಗಿ ಒಂದು ಉನ್ನತ ಮಟ್ಟದ ಹುದ್ದೆ ಅಲಂಕರಿಸಿದೆ.

ಹಿಂದೆ ತಿರುಗಿ ನೋಡಿದರೆ ಇದೆಲ್ಲ ಸೂರ್ಯವಂಶ ಫಿಲಂ ಅಲ್ಲಿ ಬರೋ ಬೆಳ್ಳಿ ಚುಕ್ಕಿ ಬಾನಿನಲ್ಲಿ ಹಾಡಿನ ತರ ಕಾಣ್ತದೆ. ಒಂದೊಮ್ಮೆ ನನಗೆ ಅನ್ನೋಕೆ ಶುರುವಾಗುತ್ತೆ ಇದೆಲ್ಲ ಕನಸ ಇಲ್ಲ ನಿಜಾನಾ ಅಂತ. ನಾನಂದು ನನ್ ಕೈಲಿ ಏನೂ ಆಗಲ್ಲ ಅಂತ ಸುಮ್ನೆ ಅದೇ ಕೆಲಸ ಮಾಡ್ಕೊಂಡು ಹೋಗಿದ್ದಿದ್ರೆ ಇವತ್ತು ಅದೇ ಕಾರ್ ಷೋರೂಮ್ ಅಲ್ಲಿ ಕಾರ್ ಒರಿಸ್ಕೊಂಡು ಇರ್ತಿದ್ದೆ, ಇಲ್ಲ ಹಾಸ್ಪಿಟಲ್ ಅಲ್ಲಿ ವಾರ್ಡ್ ಬಾಯ್ ಆಗಿ ಕೆಲಸ ಮಾಡ್ತಾ ನನ್ ಜೀವನ ತಳ್ತಾ ಇದ್ದೆ.

ಒಂದ್ ಎಕ್ಸಾಮ್ ಫೇಲ್ ಆದ್ರೆ ನಮ್ ಜೀವನ ಮುಗಿದೇ ಹೋಯ್ತು ಅಂತ ತಪ್ಪು ದಾರಿ ತುಳಿಯೋ ನಮ್ಮ ಈಗಿನ ಯುವ ಜನತೆ ಒಂದ್ ಯೋಚನೆ ಮಾಡಬೇಕು. **failure is the stepping stone of success.** ಸೋತೆ ಅಂತ ಕುಗ್ಗಬೇಡಿ ಜೀವನ ಇನ್ನು ಇದೆ ನೀವು ಮತ್ತೆ ಗೆಲ್ಲಬಹುದು. ಜೀವನದಲ್ಲಿ ನಮಗೆ ತುಂಬಾ ಅವಕಾಶಗಳು ಸಿಗುತ್ತೆ. ಯಾವುದೂ ಕೊನೆಯಲ್ಲ. ಕಠಿಣ ಪರಿಶ್ರಮ, ಶ್ರದ್ದೆ ಇದ್ರೆ ಏನಾದ್ರು ಸಾಧಿಸಬಹುದು.

ಒಂದು ಕಾರ್ ಷೋರೂಮ್ ಅಲ್ಲಿ ಕಾರ್ ಒರಿಸ್ಕೊಂಡು ಇದ್ದ ನನ್ನ ಮನೆಗೆ ಈಗ ಕಾರು ಬರುತ್ತೆ, ಒಂದು ಹಾಸ್ಪಿಟಲ್ ಅಲ್ಲಿ ವಾರ್ಡ್ ಬಾಯ್ ಆಗಿ ಕೆಲಸ ಮಾಡ್ತಿದ್ದ ನಾನು ಈಗ ಒಂದು ಹಾಸ್ಪಿಟಲ್‌ನ ಅಧಿಕಾರಿಯಾಗೋ ವರೆಗೂ ನನ್ನ ಜೀವನ ಬದಲಾಗಿದೆ.



ಇದೆಲ್ಲ ನನ್ ಕೈಲಿ ಸಾಧ್ಯ ಆಗಿದೆ ಅಂದ್ರೆ ನಿಮ್ ಕೈಲೂ ಸಾಧ್ಯ ಆಗುತ್ತೆ. ಮೊದಲು ನಿಮ್ ಮನಸಲ್ಲಿ ಇದು ನನ್ ಕೈಲಿ ಆಗಲ್ಲ ಅಂತ ಇರೋ ಆ ನೆಗೆಟಿವ್ ನ ತಗೆದು ಹಾಕಿ. ಯಾವುದೇ ಕೆಲಸ ಇರ್ಲಿ ಇದು ನನ್ ಕೈಲಿ ಸಾಧ್ಯ ಇದೆ ನಾನ್ ಮಾಡೇ ಮಾಡ್ತೀನಿ ಅಂತ ಮನಸ್ಸು ಮಾಡಿ. ಅದು ಖಂಡಿತಾ ನೆರವೇರುತ್ತೆ. ನೀವು ಮಾಡೋ ಕೆಲಸ ಕಷ್ಟ ಪಟ್ಟು ಮಾಡೋಕಿಂತ ಇಷ್ಟ ಪಟ್ಟು ಮಾಡಿ ಯಶಸ್ಸು ಖಂಡಿತಾ ನಿಮ್ಮದಾಗುತ್ತೆ.

ಜೀವನ ಅನ್ನೋದು ಒಂಥರಾ ಸೋಲು ಗೆಲುವಿನ ಆಟ, ಗೆದ್ದವನಿಗೆ ಸೋಲಬಾರದೆಂಬ ಭಯ ಇದ್ದರೆ, ಸೋತವನಿಗೆ ಗೆಲ್ಲಬೇಕೆಂಬ ಛಲವಿರುತ್ತೆ. ಛಲದಿಂದ ಕೆಲಸ ಮಾಡಿದರೆ ಯಾವುದು ವಿಫಲವಾಗಲ್ಲ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248